ಜಯಕಿರಣ ದಿನಪತ್ರಿಕೆ
19.10.2024

# ಎಂಜಿನಿಯರ್ 2024: ಎನ್ಐಟಿಕೆಯ ವಾರ್ಷಿಕ ತಾಂತ್ರಿಕ ಉತ್ಸವ




(ಜಯಕಿರಣ ವರದಿ)

ಸುರತ್ಕಲ್: ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ, ಸುರತ್ಕಲ್ ತನ್ನ ಬಹು ನಿರೀಕ್ಷಿತ ವಾರ್ಷಿಕ ತಾಂತ್ರಿಕ ಉತ್ಸವವಾದ ದಿ ಇಂಜಿನಿಯರ್ 2024 ಎನ್ಐಟಿಕೆ ಸುರತ್ಕಲ್ ಕ್ಯಾಂಪಸ್‌ನಲ್ಲಿ ಪ್ರಾರಂಭಿಸಿತು.

ಉದ್ಘಾಟನಾ ಸಮಾರಂಭವು ಎನ್ಐಟಿಕೆ ಕ್ಯಾಂಪಸ್‌ನಲ್ಲಿ ನಡೆಯಿತು. ಶ ಶಿಲ್ಪಾ ಆರ್, ದಿ ಹಟ್ಟಿ ಗೋಲ್ಡ್ ಮೈನ್ಸ್ ಕಂ.ಲಿ.ನ ಆಡಳಿತ ನಿರ್ದೇಶಕರು ಮುಖ್ಯ ಅತಿಥಿಗಳಾಗಿ, ದಿ ಹಟ್ಟಿ ಗೋಲ್ಡ್ ಮೈನ್ಸ್ ಕಂ.ನ ಕಾರ್ಯನಿರ್ವಾಹಕ ನಿರ್ದೇಶಕ ಪ್ರಕಾಶ್ ಗೌರವ ಅತಿಥಿಗಳಾಗಿದ್ದರು. ಎನ್ಐಟಿಕೆ ಉಪನಿರ್ದೇಶಕ ಪ್ರೊ. ಸುಬಾಷ್ ಸಿ. ಯರಗಲ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು, ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಪ್ರೊ.ಎ.ಸಿ. ಹೆಗಡೆ, ಇಂಜಿನಿಯರ್ ಮತ್ತು ಟೆಕ್ನಿಕಲ್ ಕ್ಲಬ್‌ನ ಪ್ರಭಾರಿ ಪ್ರೊಫೆಸರ್ ಡಾ.ಎಸ್.ಬಿ.ಆರ್ಯ ಉಪಸ್ಥಿತರಿದ್ದರು.

ಈ ವರ್ಷದ ಥೀಮ್ "ಎನ್ಚ್ಯಾಂಟೆಡ್ ಕಾಸ್ಮೋಸ್" ವಿಶಾಲವಾದ ಬ್ರಹ್ಮಾಂಡದ ನಾವೀನ್ಯತೆ, ಕುತೂಹಲ ಮತ್ತು ಅನ್ವೇಷಣೆಯನ್ನು ಪ್ರೇರೇಪಿಸುವ ಗುರಿಯನ್ನು ಹೊಂದಿದೆ.

ಅಕ್ಟೋಬರ್ 17 ರಿಂದ 20, 2024 ರವರೆಗೆ ನಿಗದಿಪಡಿಸಲಾದ ಈ ಸಂಭ್ರಮವು 25,000ಕ್ಕೂ ಹೆಚ್ಚು ಸಂದರ್ಶಕರನ್ನು ಆಕರ್ಷಿಸಲಿದೆ ಮತ್ತು ಹ್ಯಾಕಥಾನ್, ಆಟೋ ಎಕ್ಸ್‌ಪೋ, ಗೇಮಿಂಗ್ ಈವೆಂಟ್‌ಗಳು, ಟೆಕ್ನೈಟ್ಸ್ ಪ್ರಾಜೆಕ್ಟ್‌ಗಳು, ರೋಬೋಕಾನ್ಸ್ ಎಕ್ಸ್‌ಪೋ, ಟ್ರೋನಿಕ್ಸ್ ಎಕ್ಸ್‌ಪೋ ಸೇರಿದಂತೆ ವಿವಿಧ ತಾಂತ್ರಿಕ ಡೊಮೇನ್‌ಗಳಲ್ಲಿ 30ಕ್ಕೂ ಹೆಚ್ಚು ಈವೆಂಟ್‌ಗಳನ್ನು ಒಳಗೊಂಡಿದೆ.